ಈ ವಿಚಾರ ಅರ್ಥವಾಗಬೇಕಾದರೆ, ನಮ್ಮ ಮನಸ್ಸು ಪವಿತ್ರವಾಗಿರಬೇಕು; ಸೂಕ್ಷ್ಮಾತಿಸೂಕ್ಷ್ಮವಾಗಿರಬೇಕು. ಈಗಿನ ನಮ್ಮ ಮನಸ್ಸು ಸ್ಥೂಲವಿಚಾರಗಳನ್ನು ಮಾತ್ರ ಅರ್ಥಮಾಡಿಕೊಳ್ಳುತ್ತದೆ. ಹೀಗಾಗಿ ನಾವು ಪರಮಹಂಸರ ಗುಣಗಳ ಚಿಂತನೆಗಳನ್ನು ಮಾತ್ರ ಮಾಡಬಹುದು. ಮನಸ್ಸು ಶುದ್ಧವಾದ ಹಾಗೆ, ಅದು ಸೂಕ್ಷ್ಮ ವಿಚಾರಗಳನ್ನೂ ಅರ್ಥ ಮಾಡಿಕೊಳ್ಳುತ್ತದೆ. ಆಗ ಮಾತ್ರ ಶ್ರೀರಾಮಕೃಷ್ಣರ ತತ್ತ್ವಚಿಂತನೆ ಸಾಧ್ಯ.

ಶ್ರೀರಾಮಕೃಷ್ಣರು ತಮ್ಮದೇ ಆದ ಧ್ಯಾನಮೂರ್ತಿಯನ್ನು (ಭಾವಚಿತ್ರ) ನೋಡಿ ಹೇಳುತ್ತಿದ್ದರು, "ಇದು ಯೋಗದ ಅತ್ಯುನ್ನತ ಅವಸ್ಥೆ" ಎಂದು. ನಮಗೆ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೆ? ಯಾಕೆ ಆಗುತ್ತಿಲ್ಲವೆಂದರೆ ಯೋಗದ ಉಚ್ಚ ಸ್ಥಿತಿಯನ್ನು ಅರಿಯಬೇಕಾದರೆ ನಾವೇ ಸ್ವತಃ ಯೋಗಿಗಳಾಗಬೇಕು. ನಾವು ಯೋಗಿಗಳಲ್ಲ. ಅದರಿಂದ ನಮಗೆ ಈ ಉಚ್ಚ ಅವಸ್ಥೆಯನ್ನು ಅರಿಯಲು ಆಗುತ್ತಿಲ್ಲ. ಆದರೂ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡುತ್ತ, ಅವರ ಬಗ್ಗೆ ಚಿಂತನೆ ಮಾಡಿದರೆ, ಅವರ ಬಗ್ಗೆ ಆಳವಾಗಿ ಧ್ಯಾನ ಮಾಡಿದರೆ ಮಾತ್ರವೇ ಆ ವಿಚಾರವನ್ನು ತಿಳಿದುಕೊಳ್ಳಬಹುದು. ಈ ವಿಷಯ ಮಾತ್ರ ಸಂಪೂರ್ಣವಾಗಿ ನನ್ನ ವೈಯಕ್ತಿಕ ಅನುಭವ. ನನ್ನ ಮನಸ್ಸಿಗೆ ಏನು ಬಂದಿದೆಯೋ ಅದನ್ನೀಗ ಹೇಳುತ್ತಿದ್ದೇನೆ: ಶ್ರೀರಾಮಕೃಷ್ಣರದ್ದು ಅತ್ಯುನ್ನತ ಆಧ್ಯಾತ್ಮಿಕ ಭಾವ. ಅವರು ಕಣ್ಣುಗಳೆರಡೂ ಅರ್ಧ ತೆರೆದಿವೆ. ಈ ಜಗತ್ತೆಲ್ಲವೂ ಅದರೊಳಗೆ ಲಯವಾಗಿದೆ. ಯಾವ ಬಾಹ್ಯಾಲಂಬನೆಯೂ ಅಲ್ಲಿ ಕಾಣುವುದಿಲ್ಲ. ಯಾವ ಅದ್ಭುತವಾದ ಭಾವಾವಸ್ಥೆಯಲ್ಲಿ, ಅಗಾಧ ಆನಂದ ಸಾಗರದಲ್ಲಿ ಅವರು ಮುಳುಗಿದ್ದಾರೆಯೋ, ಈ ಭಾವವನ್ನು ನಾವು ಧ್ಯಾನದ ಸಮಯದಲ್ಲಿ ಚಿಂತಿಸಬೇಕು. ಅದೂ ಅಲ್ಲದೆ, ಯುಗಯುಗಗಳಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ಯಾರು ರಾಮನಾಗಿ, ಯಾರು ಕೃಷ್ಣನಾಗಿ ಅವತಾರವೆತ್ತಿದ್ದಾನೋ, ಆತನೇ (ಸ್ವಯಂ ಭಗವಾನ್) ಈ ಸಲ ಮನುಷ್ಯರೂಪದಲ್ಲಿ, ಮಾಯಾವಲಂಬನೆ ಮಾಡಿಕೊಂಡು, ಶ್ರೀರಾಮಕೃಷ್ಣರೂಪದಲ್ಲಿ ಬಂದಿದ್ದಾನೆ – ಹೀಗೆಂದು ಕೂಡ ನಾವು ಧ್ಯಾನಿಸಬಹುದು.

ಶಿವಮಹಿಮ್ನಾ ಸ್ತೋತ್ರದಲ್ಲಿ ಶಿವನನ್ನು ಉದ್ದೇಶಿಸಿ ಪುಷ್ಪದಂತನು ಹೀಗೆ ಹೇಳುತ್ತಾನೆ: "ಯೋಗಿಗಳು ಯಾವುದರ ಬಗ್ಗೆ ಧ್ಯಾನ ಮತ್ತು ತತ್ತ್ವಚಿಂತನೆ ಮಾಡುತ್ತಾರೋ ಅದೇ ನೀನು."

**ಮನಃ ಪ್ರತ್ಯಕ್ಚಿತ್ತೇ ಸವಿಧಮವಧಾಯಾತ್ತಮರುತಃ । ಪ್ರಹೃಷ್ಯದ್ರೋಮಾಣಃ ಪ್ರಮದಸಲಿಲೋತ್ಸಂಗಿತದೃಶಃ ।**
**ಯದಾಲೋಕ್ಯಾಹ್ಲಾದಂ ಹ್ರದ ಇವ ನಿಮಜ್ಜ್ಯಾಮೃತಮಯೇ । ದಧತ್ಯಂತಸ್ತತ್ತ್ವಂ ಕಿಮಪಿ ಯಮಿನಸ್ತತ್ಕಿಲ ಭವಾನ್ ॥**

*(ಶಿವಮಹಿಮ್ನಾ ಸ್ತೋತ್ರ, ೧೨)*

"ಶಾಸ್ತ್ರವಿಹಿತವಾದ ರೀತಿಯಲ್ಲಿ ಪ್ರಾಣಾಯಾಮವನ್ನು ಮಾಡಿದ ಯೋಗಿಗಳು ಮನಸ್ಸನ್ನು ಅಂತರಾತ್ಮನಲ್ಲಿ ಕೂಡಿಸಿ ರೋಮಾಂಚನವುಳ್ಳವರಾಗಿ ಆನಂದಬಾಷ್ಪಪೂರಿತನಯನರಾಗಿ ಯಾವ ಅನಿರ್ವಚನೀಯವಾದ ತತ್ತ್ವವನ್ನು ಒಳಗೇ ಕಂಡು ಅಮೃತಮಯವಾದ ಸರಸ್ಸಿನಲ್ಲಿ ಮುಳುಗಿದಂತೆ ಆನಂದವನ್ನು ಹೊಂದುತ್ತಾರೋ, ಆ ತತ್ತ್ವವು ನಿಜವಾಗಿ ನೀನೇ ಆಗಿದ್ದೀಯೆ."

**ಪ್ರಶ್ನೆ: ಜಪಧ್ಯಾನಾದಿಗಳ ಸಮಯದಲ್ಲಿ ಶ್ರೀರಾಮಕೃಷ್ಣರ ಮೂರ್ತಿಯ ಬಗ್ಗೆ ಧ್ಯಾನಮಾಡುವಾಗ ಕೆಲವು ಸಲ ಶ್ರೀಮಾತೆಯವರ (ಶ್ರೀಶಾರದಾದೇವಿಯವರ) ಮೂರ್ತಿಯೂ ಮನಸ್ಸಿನಲ್ಲಿ ಮೂಡುತ್ತದೆ. ಆದರೆ ನಾವು ಶ್ರೀರಾಮಕೃಷ್ಣರ ಜಪಧ್ಯಾನ ಮಾಡುವಾಗ ಶ್ರೀಮಾತೆಯವರ ಧ್ಯಾನ ಮಾಡುವುದು ಸರಿಯೇ ಅಥವಾ ಶ್ರೀಮಾತೆಯವರ ಧ್ಯಾನವನ್ನು ತಡೆಹಿಡಿದು, ಪರಮಹಂಸರ ಮೂರ್ತಿಯ ಧ್ಯಾನವನ್ನು ಮಾತ್ರ ಮಾಡಬೇಕೇ?**

**ಸ್ವಾಮೀಜಿ:** ಬಹಳಷ್ಟು ಮಂದಿಗೆ ಈ ಸಂಶಯ ಬರುತ್ತದೆ. ಇದಕ್ಕೆ ಉತ್ತರ ಏನೆಂದರೆ, ಶ್ರೀರಾಮಕೃಷ್ಣರ ಧ್ಯಾನ ಮಾಡುವಾಗ ವಿಶೇಷವಾಗಿ ಶ್ರೀರಾಮಕೃಷ್ಣರ ಮೇಲೆಯೇ ಮನಸ್ಸನ್ನು ಕೇಂದ್ರೀಕರಿಸಬೇಕು. ಶ್ರೀಮಾತೆಯವರೇ ಹೇಳುವ ಹಾಗೆ, ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಭಿನ್ನವಲ್ಲ. ಆದರೆ ಮೂರ್ತಿ ಭಿನ್ನ ತಾನೆ? ಹೀಗಾಗಿ ಪರಮಹಂಸರ ಧ್ಯಾನ ಮಾಡುವಾಗ ಅವರ ಮೂರ್ತಿಯ ಬಗ್ಗೆಯೇ ಧ್ಯಾನಿಸಿ. ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಒಂದೇ (ಅಭಿನ್ನ) ಎಂಬ ಭಾವದಲ್ಲಿ ಖಂಡಿತವಾಗಿಯೂ ಧ್ಯಾನ ಮಾಡಬಹುದು. ಆದರೆ ಶ್ರೀರಾಮಕೃಷ್ಣರ ಬಗ್ಗೆಯೂ ಮತ್ತು ಶಾರದಾದೇವಿಯವರ ಬಗ್ಗೆಯೂ ಒಂದೇ ಕಾಲದಲ್ಲಿ ಧ್ಯಾನಮಾಡಬಹುದೇ ಎಂಬ ಸಂಶಯವನ್ನು ಮನಸ್ಸಿನಲ್ಲಿಡಲೇಬೇಡಿ. ಮನಸ್ಸಿನ ಏಕಾಗ್ರತೆಗಾಗಿಯೇ ಜಪಮಾಡುವುದು. ಹೀಗಾಗಿ ಒಂದೇ ಮೂರ್ತಿಯ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ.

ಆದರೆ ಶ್ರೀರಾಮಕೃಷ್ಣರ ಕೆಲವು ಸಾಕ್ಷಾತ್ ಶಿಷ್ಯರು ಒಬ್ಬ ವ್ಯಕ್ತಿಗೇ ಎರಡೂ ಮಂತ್ರಗಳನ್ನು ಉಪದೇಶ ಮಾಡಿದ ಸಂದರ್ಭಗಳೂ ಇವೆ. ಆಗ ಕೂಡ ಒಂದೇ ಕಾಲಕ್ಕೆ ಎರಡೂ ಮಂತ್ರಗಳ ಜಪ ಮಾಡಲು ಸಾಧ್ಯವಿಲ್ಲ. ಹಾಗಿದ್ದಾಗ ಮೊದಲು ಶ್ರೀರಾಮಕೃಷ್ಣರ ಜಪ ಮಾಡಿ, ಅನಂತರ ಶ್ರೀಮಾತೆಯವರ ಜಪ ಮಾಡಬೇಕು. ಆದರೆ ಶ್ರೀರಾಮಕೃಷ್ಣರ ಜಪದ ಸಮಯದಲ್ಲಿ ಅವರ ಮೂರ್ತಿಯನ್ನೇ ಮೊದಲು ಧ್ಯಾನಿಸಿ ಜಪಮಾಡಿ. ಅನಂತರ ಇಷ್ಟವಿದ್ದಲ್ಲಿ ಶ್ರೀಮಾತೆಯವರ ಧ್ಯಾನ ಮಾಡಬಹುದು. ಇದಕ್ಕಾಗಿ ಇನ್ನೊಂದು ಮಂತ್ರಜಪದ ಆವಶ್ಯಕತೆ ಇಲ್ಲ. ಇದು ಪ್ರಾಯೋಗಿಕ ವಿಚಾರ. ನೀವು ಗುರುಗಳಿಂದ ಬೇರೆ ಏನಾದರೂ ನಿರ್ದೇಶನಗಳನ್ನು ಪಡೆದಿದ್ದರೆ ಆ ರೀತಿಯಲ್ಲಿಯೇ ಮುಂದುವರಿಯಿರಿ. ಇದರಲ್ಲಿ ಯಾವುದೇ ಸಂಶಯವನ್ನು ಇಟ್ಟುಕೊಳ್ಳಬೇಡಿ. •

ಸಿಮ್ಲಾದಲ್ಲಿ ಹೊಸ ರೀತಿಯ ಜೀವನ ಆರಂಭವಾಯಿತು. ಬೃಂದಾವನದ ನಿರ್ಜನತೆ, ಕಠೋರ ತಪಸ್ಸಿನ ಜೀವನವೆಲ್ಲಿ? ಇಲ್ಲಿಯ ಪಾಶ್ಚಾತ್ಯ ರೀತಿನೀತಿಯ ಆಧುನಿಕ ಜೀವನವೆಲ್ಲಿ? ಅಜಗಜಾಂತರ ವ್ಯತ್ಯಾಸ. ಈ ಮನೆಗೆ ಸುಧೀರಾ ಅಕ್ಕ ಆಗಾಗ ಬಂದು ಹೋಗುತ್ತಿದ್ದರು. ಅವರು ವಾಸವಾಗಿದ್ದ ಅವರ ಅಣ್ಣನ ಮನೆ ಇಲ್ಲಿಂದ ತುಂಬಾ ದೂರದಲ್ಲಿತ್ತು. ಸೋದರತ್ತೆಯ ಮಗಳ ಮನೆಯವರಿಗೆ ಕೊಲ್ಕತಾಗೆ ವರ್ಗವಾದಾಗ, ನಾನೂ ಅವರ ಜೊತೆ ಕೊಲ್ಕಾತಾಗೆ ಬಂದೆ. ಸ್ವಾಮಿ ಪ್ರಜ್ಞಾನಂದರು ಆಗ ಉದ್ಬೋಧನದಲ್ಲಿದ್ದರು. ಆಗಾಗ ಈ ಮನೆಗೆ ಬರುತ್ತಿದ್ದರು. ಉದ್ಬೋಧನಕ್ಕೆ ಹೋಗಿ ಶ್ರೀಮಾತೆಯನ್ನು ಕಂಡುಬರುವಂತೆ ಅವರು ನನಗೆ ಹೇಳಿದರು. ನಾನು ಉದ್ಬೋಧನಕ್ಕೆ ಹೋದಾಗ ಶ್ರೀಮಾತೆ ಬಲರಾಮ ಮಂದಿರಕ್ಕೆ ಹೋಗಿದ್ದರು. ಅವರು ಹಿಂತಿರುಗಿದ ಮೇಲೆಯೂ ಹೆಚ್ಚೇನೂ ಮಾತುಕತೆ ನಡೆಯಲಿಲ್ಲ. ಹಾಗೆಯೇ ನಾನು ವಾಪಸ್ಸು ಬರಬೇಕಾಯಿತು. "ಕುಳಿತು ಎರಡು ಮಾತನಾಡಲೂ ಆಗಲಿಲ್ಲವಲ್ಲಾ" ಎಂದು ಶ್ರೀಮಾತೆಯೂ ತುಂಬ ದುಃಖಪಟ್ಟರು. ಆದರೆ ತುಂಬು ಆಶೀರ್ವಾದ ಮಾಡಿ ನನ್ನನ್ನು ಕಳುಹಿಸಿಕೊಟ್ಟರು. ಆ ವರ್ಷದ ದುರ್ಗಾಪೂಜೆಯ ನಂತರ ಶ್ರೀಮಾತೆ ಕಾಶಿಗೆ ಹೋದರು. ಸುಧೀರಾ ಅಕ್ಕ ನನ್ನನ್ನೂ ಕಾಶಿಗೆ ಕರೆದೊಯ್ದರು. ನಾನು ಎಲ್ಲಿಯೂ ತಿರುಗಲು ಹೋಗದೆ, ಸಾಧ್ಯವಾದಷ್ಟು ಶ್ರೀಮಾತೆಯ ಬಳಿಯೇ ಕಾಲ ಕಳೆದೆ. ಅನಂತರ ಅಲ್ಲಿಂದ ಕೊಲ್ಕತಾಗೆ ಮರಳಿದೆ.

ಸುಧೀರಾ ಅಕ್ಕ ನನ್ನನ್ನು ಹರಿಪಾಲಿನ ಹತ್ತಿರದ ಜೆಜೂರ್ ಎಂಬ ಹಳ್ಳಿಯಲ್ಲಿರುವ ತಮ್ಮ ಮನೆಗೆ ಕರೆದೊಯ್ದರು. ಅಲ್ಲಿ ಅವರ ಚಿಕ್ಕಮ್ಮ ಮುಂತಾದವರಿದ್ದರು. ನನ್ನನ್ನು ಅವರೊಂದಿಗೆ ಬಿಟ್ಟು ಸುಧೀರಾ ಅಕ್ಕ ಕೊಲ್ಕತಾಗೆ ಮರಳಿದರು. ಕೆಲದಿನಗಳಲ್ಲಿಯೇ ಆ ಮನೆಯವರ ಅಸಂತೋಷ ನಾನಾ ರೀತಿಯಲ್ಲಿ ಪ್ರಕಟವಾಗತೊಡಗಿತು. ಸುಧೀರಾ ಅಕ್ಕನ ದೊಡ್ಡಪ್ಪನ ಮಗ ಬಂದವನು, "ಸುಧೀರಾ ಯಾರನ್ನು ಇಲ್ಲಿ ಬಿಟ್ಟುಹೋಗಿದ್ದಾಳೆ? ಇವಳ ಪರಿಚಯವೇನು? ಸರಿಯಾಗಿ ಎಲ್ಲಾ ಹೇಳದಿದ್ದರೆ ಪೊಲೀಸರಿಗೆ ಹಿಡಿದುಕೊಡುತ್ತೇನೆ" ಎಂದೆಲ್ಲಾ ಕೂಗಾಡತೊಡಗಿದನು. ನನಗೆ ಇನ್ನು ಸಹಿಸಲಾಗಲಿಲ್ಲ. ಕೂಡಲೇ ಸುಧೀರಾ ಅಕ್ಕನಿಗೆ ಪತ್ರ ಬರೆದೆ. ಬೇಗ ಬಂದು ನನ್ನನ್ನು ಕರೆದೊಯ್ಯದಿದ್ದರೆ ನಾನು ಇಲ್ಲಿಂದ ಹೊರಟು ಹೋಗಿಬಿಡುತ್ತೇನೆ ಎಂದು ತಿಳಿಸಿದೆ. ಪತ್ರ ಸಿಕ್ಕಿದ್ದೇ ಅವರು ಹಳ್ಳಿಗೆ ಬಂದರು. ಮರುದಿನವೇ ನಾವು ಕೊಲ್ಕತಾಗೆ ಬಂದೆವು.

ಸುಧೀರಾ ಅಕ್ಕ ನನ್ನನ್ನು ಶ್ರೀರಾಮಕೃಷ್ಣರ ಶಿಷ್ಯರಾದ ಕಾಳಿಪದ ಘೋಷರ ತಂಗಿಯ ಮನೆಯಲ್ಲಿ ಬಿಟ್ಟರು. ಅವರನ್ನು ನಾವು 'ಅತ್ತೆಮ್ಮ' ಎಂದು ಕರೆಯುತ್ತಿದ್ದೆವು. ಏಪ್ರಿಲ್‌ನಿಂದ ಜುಲೈ ತಿಂಗಳ ಮಧ್ಯದವರೆಗೆ ನಾನು ಅಲ್ಲಿದ್ದೆ. ಒಂದು ಬಾಲಕಿಯರ ಶಾಲೆಯ ವಸತಿಗೃಹದ ವಾರ್ಡನ್ ಕೆಲಸ ನೋಡಿಕೊಳ್ಳಲು ಒಬ್ಬರ ಅಗತ್ಯವಿತ್ತು. ಅಲ್ಲಿದ್ದು ಕೆಲಸ ಮಾಡುತ್ತ ನಾನು ಓದನ್ನು ಮುಂದುವರೆಸಲಿ ಎಂಬುದು ಸುಧೀರಾ ಅಕ್ಕನ ಇಚ್ಛೆಯಾಗಿತ್ತು. ನಾನು ಅಲ್ಲಿಗೆ ಹೊರಡಲು ಸಿದ್ಧಳಾದೆ. ಆಗ ನನ್ನ ಬಳಿ ಕೇವಲ ಎರಡು ಜೊತೆ ಬಟ್ಟೆ ಮಾತ್ರವಿತ್ತು. ಅತ್ತೆಮ್ಮ ನನಗೆ ಒಂದು ಟ್ರಂಕ್, ಹಾಸಿಗೆ, ಒಳ್ಳೆಯ ಸೀರೆ ಎಲ್ಲವನ್ನೂ ಕೊಂಡುಕೊಟ್ಟರು; ಸ್ವಂತ ಮಗಳಂತೆ ನೋಡಿಕೊಂಡರು.

ವಸತಿಗೃಹದ ಒಂದು ದೊಡ್ಡ ಕೋಣೆಯಲ್ಲಿ ೬೦ ಜನ ಹುಡುಗಿಯರಿದ್ದರು. ಅವರ ಜೊತೆ ನಾನು ಇರಬೇಕಾಯಿತು. ಬೆಳಿಗ್ಗೆ ೫ ಗಂಟೆಗೆ ಹುಡುಗಿಯರನ್ನು ಎಬ್ಬಿಸಿ ಅವರ ಪ್ರಾರ್ಥನೆ, ಓದು ಮುಂತಾದವು ಎಲ್ಲಾ ಸರಿಯಾಗಿ ನಡೆಯುತ್ತಿದೆಯೆ ಎಂದು ನೋಡಿಕೊಳ್ಳುವುದು ನನ್ನ ಕೆಲಸವಾಗಿತ್ತು. ಅವರೆಲ್ಲಾ ಶಾಲೆಗೆ ಹೋದ ಮೇಲೆ ನನಗೆ ವಿರಾಮ ಸಿಗುತ್ತಿತ್ತು. ಬೆಳಗ್ಗೆ ಜಪ ಮಾಡಲೂ ಸಮಯ ಸಿಗುತ್ತಿರಲಿಲ್ಲ. ಬಟ್ಟೆ ಒಣಗಿಸಲು ತಾರಸಿಗೆ ಹೋದಾಗ ಅಲ್ಲಿಯೇ ನಿಂತು ಜಪ ಮಾಡುತ್ತಿದ್ದೆ. ಈ ಹೊಸ ಜೀವನಕ್ಕೂ ನಾನು ಎರಡು ಮಾತಿಲ್ಲದೆ ಹೊಂದಿಕೊಂಡೆ. ದಸರಾ ರಜೆಯವರೆಗೂ ಅಲ್ಲೇ ಇದ್ದೆ. ಅವರೆಲ್ಲಾ ನಾನು ಮಾಡುತ್ತಿದ್ದ ಕೆಲಸವನ್ನು ಮೆಚ್ಚಿಕೊಂಡಿದ್ದರು.

ಆದರೆ ನನ್ನ ವಿದ್ಯಾಭ್ಯಾಸಕ್ಕೆ ಇದರಿಂದ ಯಾವುದೇ ರೀತಿಯ ಸಹಾಯ ಸಿಕ್ಕದ್ದರಿಂದ ಸುಧೀರಾ ಅಕ್ಕ ಅಲ್ಲಿಂದ ಹೊರಟು ಬರಲು ನನಗೆ ತಿಳಿಸಿದರು. ರಜೆಯಲ್ಲಿ ಗಯಾ, ಕಾಶಿ, ಅಲಹಾಬಾದ್ ಮುಂತಾದ ಸ್ಥಳಗಳಿಗೆ ಕರೆದುಕೊಂಡು ಹೋದರು. ಕೊಲ್ಕತಾಗೆ ಹಿಂತಿರುಗಿದ ಮೇಲೆ ಮತ್ತೆ ಕಾಳಿಪದ ಘೋಷರ ತಂಗಿಯ ಮನೆಯಲ್ಲಿ ಇರತೊಡಗಿದೆ. ಅಲ್ಲಿ ದಿನಗಳು ಆನಂದದಿಂದ ಕಳೆಯುತ್ತಿದ್ದವು. ಶ್ರೀಮಾತೆ ಕೊಲ್ಕತಾಗೆ ಬಂದಾಗಲೆಲ್ಲಾ ಅತ್ತೆಮ್ಮ ನನ್ನನ್ನು ಅವರ ಬಳಿ ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆ ಅವರ ಮನೆಯ ಹೆಂಗಸರ ಜೊತೆ ಉದ್ಬೋಧನಕ್ಕೆ ಹೋಗಿದ್ದೆ. ಆ ಸಮಯದಲ್ಲಿ ಶ್ರೀಮಾತೆಯ ಸೇವೆ ಮಾಡುತ್ತಿದ್ದ ಒಬ್ಬ ಮಹಿಳೆ ತನ್ನ ಊರಿಗೆ ಹೊರಟುಹೋಗಿದ್ದಳು. ಶ್ರೀಮಾತೆ ನನ್ನನ್ನು ನೋಡಿದವರು, "ನೀನೀಗ ಎಲ್ಲಿರುವೆ? ಆ ಹೆಂಗಸು ಹೊರಟುಹೋದಳು. ನೀನು ಬಂದು ಇಲ್ಲೇ ಇರು. ಇನ್ನೆಷ್ಟು ದಿನ ಅಲ್ಲಿ ಇಲ್ಲಿ ತಿರುಗುತ್ತಾ ಕಾಲ ಕಳೆಯುತ್ತೀಯೆ?" ಎಂದರು. ಹಾಗೆಯೇ ಶ್ರೀಮಾತೆ ಯೋಗಿನ್ ಮಾ ಅವರನ್ನು ಕರೆದು ಹೇಳಿದರು, "ಯೋಗಿನ್, ಇವಳಿಗೆ ಇಲ್ಲೇ ಬಂದು ಇರಲು ಹೇಳಿದ್ದೇನೆ." ಯೋಗಿನ್ ಮಾ ಹೇಳಿದರು, "ಒಳ್ಳೆಯದಾಯಿತಮ್ಮ, ಆ ಹೆಂಗಸು ಹೊರಟುಹೋದಳು.